ಈ) ಈ ರೀತಿ ಬಡ್ತಿ ಹುದ್ದೆಗಳನ್ನು ಹಣಕ್ಕಾಗಿ ಮಾರಾಟ ಮಾಡುತ್ತಿರುವುದು ನೈಜ ಜ್ಯೇಷ್ಠತೆ ಹೊಂದಿರುವ ನೌಕರರಿಗೆ ಅನ್ಯಾಯವಾಗಿಲ್ಲವೆ;

ಉ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಸರ್ಕಾರವು ಆದೇಶ ಸಂಖ್ಯೆ: ಆರ್‌ಡಿಸಿ 100 ಸಿಎಂಡಿ 74, ದಿನಾಂಕ: 30.10.75 ರಲ್ಲಿ ಮಾರುಕಟ್ಟೆ ಇಲಾಖೆಗೆ ಕಾರ್ಯಕಾರಿ ಆದೇಶದ ಮೂಲಕ ವಿವಿಧ ಪದವೃಂದದ ಹುದ್ದೆಗಳಿಗೆ ನೇಮಕಾತಿ ಬಡ್ತಿ ವಿಧಾನಗಳನ್ನು ನಿಗದಿಪಡಿಸಿದೆ. ಸದರಿ ಆದೇಶದಂತೆ ಮಾರುಕಟ್ಟೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿ/ಸಿಬ್ಬಂದಿಯ ನೇಮಕಾತಿ/ಬಡ್ತಿ ನೀಡುವಿಕೆಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲಾಗಿದೆ.

ಆ) ಹೌದು

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಇಲಾಖೆಯಲ್ಲಿರುವ ವಿವಿಧ ಅಧಿಕಾರಿ/ಸಿಬ್ಬಂದಿ ಸೇವಾ ಸಂಘಗಳೊಂದಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಬಗ್ಗೆ ಸಭೆಗಳನ್ನು ಜರುಗಿಸಿ ವಿಚಾರ ವಿನಿಮಯ ಮಾಡಿಕೊಳ್ಳಲಾಗಿದೆ. ಸದರಿ ಕೃಷಿ ಮಾರಾಟ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲು ಈಗಾಗಲೇ ಹಲವಾರು ಸಭೆಗಳನ್ನು ನಡೆಸಲಾಗಿದೆ. ಸದರಿ ಸಭೆಗೆ ಆರ್ಥಿಕ ಇಲಾಖೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಕಾನೂನು ಇಲಾಖೆಯ ಮತ್ತು ಕೃಷಿ ಮಾರಾಟ ಇಲಾಖೆಯ ಉನ್ನತಾಧಿಕಾರಿಗಳು ಹಾಜರಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಿದಂತೆ ಅವಶ್ಯಕವಾದ ಮಾಹಿತಿಗಳನ್ನು ಪಡೆದು ನಿಯಮಗಳನ್ನು ಪರಿಷ್ಕರಿಸಿ ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪರಾಮರ್ಶೆಗೆ ಒಳಪಡಿಸಲು ಕ್ರಮವಿಡಲಾಗುತ್ತಿದ್ದು ಇಷ್ಟರಲ್ಲಿಯೇ ಕರಡು ನಿಯಮಗಳನ್ನು ಪ್ರಕಟಿಸಲಾಗುವುದು.

ರಾಜ್ಯದಲ್ಲಿ ಹಳದಿ ಪಡಿತರ ಚೀಟಿ ವಿತರಣೆ

3188 (3680) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಳದಿ ಪಡಿತರ ಚೀಟಿ ವಿತರಿಸಲು ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು)

ಆ) ಫಲಾನುಭವಿಗಳ ಆಯ್ಕೆಗೆ ಅನುಸರಿಸುತ್ತಿರುವ ಮಾನದಂಡವೇನು?

ಇ) ಈ ಯೋಜನೆಗೆ ಕೇಂದ್ರಸರ್ಕಾರ ಕಳೆದ 3 ವರ್ಷಗಳಲ್ಲಿ ನೀಡಿರುವ ಸಬ್ಸಿಡಿ ಹಣ ಎಷ್ಟು?

ಈ) ಈ ರೀತಿ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಬಡತನರೇಖೆಗಿಂತ ಕೆಳಮಟ್ಟದಲ್ಲಿ ವಾಸಿಸುತ್ತಿರುವ ಶೇಕಡ 50 ರಷ್ಟು ಜನರ ಹೆಸರನ್ನು ಪಟ್ಟಿಯಿಂದ ಬಿಟ್ಟಿರುವುದು ನಿಜವೇ;

ಉ) ಫಲಾನುಭವಿಗಳನ್ನು ಗುರುತಿಸುವಲ್ಲಿ ಅವ್ಯವಹಾರ ನಡೆದಿರುವುದು ನಿಜವೇ;

ಊ) ಅರ್ಹ ಫಲಾನುಭವಿಗಳನ್ನು ಗುರುತಿಸಲು ಮತ್ತೊಮ್ಮೆ ಅವರಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದೇ;

ಋ) ಹಳದಿ ಕಾರ್ಡ್ ವ್ಯವಸ್ಥೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 42,70,806

ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ

ಕ್ರ. ಸಂ.	ಜಿಲ್ಲೆಯ ಹೆಸರು	ಗುರುತಿಸಲಾಗಿರುವ ಹಳದಿ ಪಡಿತರ ಚೀಟಿ ಫಲಾನುಭವಿಗಳು
1	2	3
1.	ಬೆಂಗಳೂರು (ಅಪ) ಪ್ರದೇಶ	136470
2.	ಬೆಂಗಳೂರು (ನಗರ)	112890
3.	ಬೆಂಗಳೂರು (ಗ್ರಾಮಾಂತರ)	197156
4.	ಬಾಗಲಕೋಟೆ	130860
5.	ಬೆಳಗಾಂ	413351
6.	ಬಳ್ಳಾರಿ	146671
7.	ಬೀದರ್	152534
8.	ಬಿಜಾಪುರ	193636
9.	ಚಾಮರಾಜನಗರ	95515
10.	ಚಿಕ್ಕಮಗಳೂರು	111360
11.	ಚಿತ್ರದುರ್ಗ	148741
12.	ದಾವಣಗೆರೆ	119424
13.	ದಕ್ಷಿಣ ಕನ್ನಡ	85196
14.	ಧಾರವಾಡ	102550
15.	ಗದಗ್	64521
16.	ಗುಲ್ಬರ್ಗಾ	261684
17.	ಹಾಸನ	175840
18.	ಹಾವೇರಿ	138323
19.	ಕೊಡಗು	46166
20.	ಕೋಲಾರ	255896
21.	ಕೊಪ್ಪಳ	118287
22.	ಮಂಡ್ಯ	151976
23.	ಮೈಸೂರು	201071

1	2	3
24.	ರಾಯಚೂರು	159483
25.	ಶಿವಮೊಗ್ಗ	137309
26.	ತುಮಕೂರು	213397
27.	ಉಡುಪಿ	69198
28.	ಉತ್ತರ ಕನ್ನಡ	131301
	ಒಟ್ಟು	**4270806**

ಆ) ಗ್ರಾಮಾಂತರ ಪ್ರದೇಶದಲ್ಲಿ ವಾರ್ಷಿಕ ಆದಾಯ ರೂ. 12,000/– ಅಥವಾ ಅದಕ್ಕಿಂತ ಕಡಿಮೆ ಮತ್ತು ನಗರ/ಪಟ್ಟಣ ಪ್ರದೇಶಗಳಲ್ಲಿ ವಾರ್ಷಿಕ ಆದಾಯ ರೂ. 17,000/– ಅಥವಾ ಅದಕ್ಕಿಂತ ಕಡಿಮೆ ಹೊಂದಿರುವ ಕುಟುಂಬಗಳನ್ನು ಅದರ ಫಲಾನುಭವಿಗಾಗಿ ಆಯ್ಕೆ ಮಾಡಲಾಗಿದೆ.

ಇ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಸಬ್ಸಿಡಿ ಅನುದಾನ ಬರುವುದಿಲ್ಲ. ಆದರೆ 31.29 ಲಕ್ಷ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ಆಹಾರಧಾನ್ಯ ಕೊಡುತ್ತಿದ್ದಾರೆ.

ಈ) ಇಲ್ಲ

ಉ) ಇಲ್ಲ. ಆದರೆ ಕೆಲವು ಕುಟುಂಬಗಳು ಕೈಬಿಟ್ಟು ಹೋಗಿವೆ ಎಂದು ಸುದ್ದಿ ಸರ್ಕಾರಕ್ಕೆ ಬಂದಿದೆ. ಈ ನ್ಯೂನತೆ ಸರಿಪಡಿಸಲು ಕ್ರಮ ಜರುಗಿದೆ.

ಊ) ಇಲ್ಲ.

ಈಗಾಗಲೇ ಮನೆ ಮನೆ ಸಮೀಕ್ಷೆಯಲ್ಲಿ ಬಿಟ್ಟು ಹೋಗಿರುವ ಅರ್ಹ ಬಿ.ಪಿ.ಎಲ್ ಫಲಾನುಭವಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ ಮತ್ತು ದಿ: 16.06.2003ರವರೆಗೆ ಕಾಲಾವಕಾಶವನ್ನು ನೀಡಿ ಅರ್ಜಿಗಳನ್ನು ಪಡೆಯಲಾಗಿದೆ.

ಋ) ಹೌದು.

ಬ್ರಹ್ಮಾವರ ಸಕ್ಕರೆ ಸಹಕಾರಿ ಕಾರ್ಖಾನೆ ಕುರಿತು

3189 (3683) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಯ ವಿವಿಧ ಬ್ಯಾಂಕ್, ಸಹಕಾರಿ ಬ್ಯಾಂಕ್ ಹಾಗೂ ಇತರೆ ಸಂಘ ಸಂಸ್ಥೆಗಳಿಂದ ಪಡೆದಿರುವ ಒಟ್ಟು ಸಾಲದ ಹಾಗೂ ಠೇವಣಿ ಹಣ ಎಷ್ಟು;

ಆ) ಯಾವ ಸಹಕಾರಿ ಸಂಘಕ್ಕೆ ಬ್ಯಾಂಕಿಗೆ ಎಷ್ಟೆಷ್ಟು ಹಣವನ್ನು ಬಾಕಿ ಉಳಿಸಿಕೊಂಡಿದೆ: ವಿವರ ನೀಡುವುದು;

ಇ) ಬಾಕಿಯಿರುವ ಸಾಲದ ಮತ್ತು ಠೇವಣಿಯ ಮರುಪಾವತಿಗಾಗಿ ಸರ್ಕಾರ ಹಾಕಿಕೊಂಡಿರುವ ಕ್ರಮಗಳೇನು?

ಶ್ರೀ ಎಚ್. ವಿಶ್ವನಾಥ (ಸಹಕಾರ ಸಚಿವರು)

ಅ) ಕಾರ್ಖಾನೆಯು ವಿವಿಧ ಬ್ಯಾಂಕ್, ಸಹಕಾರಿ ಬ್ಯಾಂಕ್, ಸಹಕಾರಿ ಬ್ಯಾಂಕ್ ಹಾಗು ಇತರೆ ಸಂಘ ಸಂಸ್ಥೆಗಳಿಂದ ಒಟ್ಟು ರೂ. 683.14 ಲಕ್ಷ ಸಾಲ ಮತ್ತು 460.94 ಲಕ್ಷಗಳನ್ನು ಠೇವನಿ ಪಡೆದಿರುತ್ತದೆ.